# ಸಮುದ್ರ ಮೂರ್ತಿಯ ಅಭಯ ಉಳಿಸಿತು ತಾಯಿ-ಮಗುವಿನ ಪ್ರಾಣ

ಅನೇಕ ಶತಮಾನಗಳಿಂದ ಭಯಂಕರ ಗಾಳಿಯ ಹೊಡೆತವನ್ನು ಪ್ರತಿಭಟಿಸಿ ಬೀಗುತ್ತ ನಿಮಿರಿ ನಿಂತಿದ್ದ ಮಹಾವೃಕ್ಷಗಳು ತಮ್ಮ ಕುಲದ ಮೂಲವನ್ನೇ ತಿರುವಿ ಮೀಟಿದಂತೆ ನೆಲಕ್ಕೆ ಉರುಳಿದುವು. ಅವು ಕಾಡೇ ಕೂಗಿಡುವಂತೆ ಶಬ್ದವನ್ನು ಮಾಡುತ್ತ ಬಿದ್ದ ರಭಸಕ್ಕೆ ಪೊದರು ಗಿಡಗಳು ಪುಡಿಯಾಗಿ ಹೋದವು.

ಮಾಂತ್ರಿಕನ ಮಂತ್ರದ ಎದುರು ಬೆದರಿ ಓಡುವ ಪಿಶಾಚಿಗಳಂತೆ ಆ ದೂಳಿಗೆ ತರಗೆಲೆ ಹುಲ್ಲು ಕಸಕಡ್ಡಿಗಳ ಹಿಂಡು ನಾನಾ ದೆಸೆಗೆ ನುಗ್ಗಿ ಚೆದುರಿ ಹೋದವು. ಜೊತೆ ಜೊತೆಗೆ ಪಶ್ಚಿಮ ದಿಗಂತದಿಂದ ಆಗಸದ ನೆತ್ತಿಗೆ ಕಾರ್ಮುಗಿಲು ಕಪ್ಪುಹೊಗೆಯ ಹೆಬ್ಬಂಡೆಯಂತೆ ಉಬ್ಬಿ ಎದ್ದಿತು. ಅದು ದುಶ್ಶಕುನ ಛಾಯೆಯಂತೆ ಮೆಲ್ಲ ಮೆಲ್ಲನೆ ಸಾವಕಾಶವಾಗಿ ಗಗನದಾದ್ಯಂತ ಹಬ್ಬಿತು. ಆ ಕಾರ್ಮೋಡ ಸಮೂಹದಲ್ಲಿ ಕೆಮ್ಮಿಂಚು ಹೊಮ್ಮಿಂಚು ಕುಡುಮಿಂಚು, ಕುಡಿಮಿಂಚುಗೆರೆ, ಬಳ್ಳಿಮಿಂಚುಗಳ ಗೊಂಚಲುಗಳು ಮೂಡಿದವು. ಅವು ಮೇಘಗಳೆಂಬ ಕಾಲಸರ್ಪಾಗ್ನಿಯ ಜಿಹ್ವೆಗಳಂತೆ ಸಂಚಲಿಸಿದವು. ಚಂಚಲವಾಗುತ್ತ ಮುನ್ನುಗ್ಗುತ್ತ ಅತಿ ಭಯಂಕರ ಹಾಗೂ ಮನೋಹರ ರೂಪದಿಂದ ರಂಜಿಸಿದವು.

ಸಿಡಿಲು ರೋಷದಿಂದ ದಿಗ್ಭಿತ್ತಿಗಳ ನಡುವಿನ ಬೆಸುಗೆ ಬಿರಿಯುವಂತೆ, ಗಿರಿವನ ಸ್ಥಿರ ಭೂಮಂಡಲ ಕಂಪಿಸುವಂತೆ ಜೋರಾಗಿ ಧ್ವನಿ ಮಾಡಿತು! ಹತ್ತಿರವಾಗುತ್ತಿರುವ ಮಳೆಯ ಭೀಷಣ ಮುಖಕ್ಕೆ ದಂಪತಿಗಳಿರ್ವರೂ ಬೆದರಿದರು. ಕಾರ್ಗತ್ತಲೆಯ ವನದ ಮಧ್ಯದಲ್ಲಿ ಉದ್ವೇಗದಿಂದ ನಡೆಯುತ್ತ ಶಿವಗುಡಿಗೆ ನಡೆದರು.

ಮಳೆಗಾಲವು ಭೋರೆಂದು ಬೀಸುತ್ತ ಪೃಥ್ವಿಯ ಕಾಡಿನ ಒಡಲಿಗೆ ಆಲಿಕಲ್ಲಿನ ಕವಣೆಗಳನ್ನೆಸೆಯಿತು. ಕತ್ತಲೆ ರಾತ್ರಿಯಲ್ಲಿ ಹೊರಗೆ ಸಿಡಿಲು ಮಿಂಚು ಗುಡುಗಿನ ಮಳೆಯ ಉಗ್ರತೆ ನಡೆದಿತ್ತು. ಆಗ ಚಿತ್ರೆಯು ಸಿತವಾಹನ (ಬಿಳಿ ಕುದುರೆಗಳುಳ್ಳ ಅರ್ಜುನ) ನಿಗೆ ಚಿತ್ರಾಂಗದೆಯ ಕಥೆಯನ್ನು ಸುಲಭ ಕಲಾಧ್ವನಿಯಿಂದ ಚಿತ್ರಿಸಿದಳು. ಕಗ್ಗತ್ತಲೆಯು ಹೊರಗೆ ಧರೆಯನ್ನು ಮುಳ್ಳು ಮೊನೆಗೆ ಎಡೆಯಿಲ್ಲದಂತೆ ಆವರಿಸಿತ್ತು. ಎಡೆಬಿಡದೆ ಮುಸಲ ಧಾರೆ (ಒನಕೆಯಷ್ಟು ದಪ್ಪವಾಗಿ ಸುರಿಯುವ ಮಳೆ) ಬೀಳುತ್ತಿತ್ತು. ಅರಣ್ಯವು ಭೈರವ ಗಾಳಿಯ ಮರ್ದನಕ್ಕೆ ಗೋಳಿಡುವಂತೆ ಹೂಂಕಾರ ಮಾಡುತ್ತಿತ್ತು!

## ಕರಗಿತು ಕಡೆಯ ರಾತ್ರಿ!

ಹೀಗೆ ರಾತ್ರಿ ಕಳೆಯುತ್ತ ಕಥೆ ಮುಗಿಯುತ್ತಿರಲು ಅರ್ಜುನನು ಮಾತಿನ ಮಧ್ಯೆ ಲಲಿತೆಯನ್ನು ಮುದ್ದಿಸುತ್ತ, ಮಾರನೇ ದಿನ ಹೊರಟು ತೀರ್ಥಯಾತ್ರೆಯನ್ನು ಮುಗಿಸಿ ಆರು ತಿಂಗಳ ನಂತರ ಮರಳಿ ಬರವೆನೆಂದು ಮಾತು ಕೊಟ್ಟನು. ಅವನು ತುಂಬಾ ಕಷ್ಟಪಟ್ಟು ಪ್ರಣಯ ಪ್ರಯತ್ನದಿಂದ ಅವಳನ್ನು ಒಪ್ಪಿಸಿದನು.

ಚಿತ್ರಾಂಗದೆಯು ಕಂಬನಿಯನ್ನು ಹರಿಸುತ್ತ ಕಾಂತನನ್ನು ನಳಿತೋಳುಗಳಿಂದ ಬಿಗಿಯಾಗಿ ಅಪ್ಪಿಕೊಂಡಳು. ಪತಿದೇವನನ್ನು ಮನಸ್ಸಿಲ್ಲದೆಯೆ ಬಿಡಲು ಸಮ್ಮತಿಸಿದಳು. ಅವರಿಬ್ಬರೂ ಮುಖಕ್ಕೆ ಮುಖ ಕೊಟ್ಟು, ಎದೆಗೆ ಎದೆಯಿಟ್ಟು ಆಲಿಂಗನದ ಸುಖ ಲಹರಿಯಲ್ಲಿ ತೇಲುತ್ತ ಮಲಗಿದರು; ಕಡೆಯ ರಾತ್ರಿ ಕರಗಿತು!

4

ಪೂವಾಗಿ ಪೋಗಿ ಮಿಡಿಗಾಯ್ಗಳಂ ಪಡೆದೊಡಲ
ವಾಸಂತದಂತ್ಯದ ರಸಾಲ

ರಾತ್ರಿ ಕಳೆಯಿತು. ಉಷೆಯು ಉದಯ ಶಿಖರಾಗ್ರದಲ್ಲಿ ಮೂಡಿದಳು. ನೋಡ ನೋಡುತ್ತಿದ್ದಂತೆ

